ಸಿದ್ದಾರೆ. ಇದು ಶುದ್ದ ಸುಳ್ಳು, ಇವರ ಹೆಸರಿನಲ್ಲಿ ೫೦೦ ಟನ್ ಕಬ್ಬು ಒಯ್ದಿದ್ದಾರೆ. ಜೊತೆಗೆ ಬೇರೆ ಏರಿಯಾದಿಂದ ಈ ಕಾರ್ಖಾನೆಗೆ ಕಬ್ಬು ತರುತ್ತಿದ್ದಾರೆ.

ಅಧ್ಯಕ್ಷರು.—ಈಗತಾನೇ ಮಂತ್ರಿಗಳು ಹೇಳಿದರು. ಷುಗರ್ ಡೈರೆಕ್ಟರ್ ಕಳುಹಿಸುತ್ತೇವೆಂದು ಮಂತ್ರಿಗಳ ಛೇಂಬರ್‌ಗೆ ಹೋಗಿ ಮಾಹಿತಿ ಕೊಡಿ, ಅನುಕೂಲವಾಗುತ್ತದೆ.

ಶ್ರೀ ಮಹಾಜನ ಶೆಟ್ಟಿ.—ಮಾಹಿತಿ ಕೊಟ್ಟಿದ್ದೇವೆ. ಯಾವರೀತಿ ತಪ್ಪು ಮಾಡುತ್ತಿದ್ದಾರೆಂಬುದನ್ನು ಉದಾಹರಣೆಯಾಗಿ ಹೇಳಿದೆ. ನಮ್ಮ ಊರಿನಲ್ಲಿ ಶಂಕರಗೌಡ ಸಿದ್ದನಗೌಡ ಪಾಟೀಲ ಎನ್ನುವ ವ್ಯಕ್ತಿಯೇ ಇಲ್ಲ. ಪತ್ರಿಕೆಗಳಲ್ಲಿ ಕಾರ್ಖಾನೆಯವರು ದೊಡ್ಡ ದೊಡ ದಾಗಿ ಜಾಹಿರಾತು ಕೊಡುತ್ತಾರೆ. ಕಬ್ಬು ೧೫ ತಿಂಗಳು ಇದ್ದರೆ, ರೈತರಿಗೆ ಲುಕ್ಸಾನು ಆಗುತ್ತದೆ. ಇದರ ಬಗ್ಗೆ ತಾವು ಯೋಗ್ಯ ತಿಳಿವಳಿಕೆ ಕೊಟ್ಟು ತಪ್ಪುಗಳನ್ನು ಕಂಡುಹಿಡಿದು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ ನಾನು ಈಗಾಗಲೇ ಇದಕ್ಕೆ ಸೂಕ್ತ ಉತ್ತರ ಕೊಟ್ಟಿದ್ದೇನೆ. ಏನೇನು ದೂರುಗಳಿವೆ ಎಂಬುದನ್ನು ಮಾನ್ಯ ಸದಸ್ಯರು ಪಟ್ಟಿಮಾಡಿ ಕೊಟ್ಟರೆ. ಸ್ಟೇಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್‌ನವರು, ಡೈರೆಕ್ಟರ್ ಆಫ್ ಶುಗರ್ ಅವರಿಂದ ತನಿಖೆ ಮಾಡಿಸುತ್ತೇನೆ. ಶಂಕರಗೌಡ ಪಾಟೀಲ್; ಪಾಟೀಲ್ ಅನ್ನುವವರು ಎಷ್ಟೋ ಜನ ಇರುತ್ತಾರೆ ನಮಗೆ ಗೊತ್ತಾಗುವುದಿಲ್ಲ ಆ ವಿಷಯವನ್ನು ತಾವು ಯಾರಿಂದ ಕಬ್ಬು ತೆಗೆದುಕೊಂಡಿದ್ದಾರೆ, ಯಾರಿಂದ ತೆಗೆದು ಕೊಂಡಿಲ್ಲ. ಹೊರಗಿನ ಜನಗಳಿಂದ ಎಷ್ಟು ತೆಗೆದುಕೊಂಡಿದ್ದಾರೆ ಯಾವ ಮೆಂಬರ್‌ನಿಂದ ತೆಗೆದುಕೊಂಡಿಲ್ಲ ಅದನ್ನೆಲ್ಲಾ ತಿಳಿಸಿ. ನಾನು ಕೆಲವು ಅಂಕಅಂಶಗಳನ್ನು ಕೊಟ್ಟಿದ್ದೇನೆ, ಅದು ಸರಿಯಿಲ್ಲ ಎಂದರೆ ತಾವು ಬರೆದುಕೊಡಿ ಪೂರ್ಣ ತನಿಖೆ ಮಾಡಿಸಿ ನಿಮಗೆ ಸೂಕ್ತ ಉತ್ತರವನ್ನು ಕೊಡುತ್ತೇನೆ.

MATTER UNDER RULE 312

re : Hardship caused due to imposition of market cess in addition to Sales Tax

MR. SPEAKER.—Sri Arumugham to raise a matter regarding hardships caused to the public by the imposition of Market Cess at 2% multipoint on food-grains in addition to Sales Tax.

SRI C.M. ARUMUGHAM.—Sir, there is a cry in the state both from the agriculturists as well as consumers. The agriculturists say that they are not getting proper rate for their produce and the consumers say that the prices are very high. This is because, I feel that there is no scientific levy by the Agriculturists Produce Market. In Karnataka I do not know for what reason they are levying Sales Tax at 4% on single point for all the foodgrains notified by the Committee, whereas there is no sales tax on these foodgrains in Tamil Nadu, there is no sales tax on foodgrains in Pondicherry, there is no sales tax on foodgrains in Maharashtra, there is no sales tax on foodgrains in Gujarat and in northern states also, there is no sales tax particularly on Wheat. Apart from the Sales Tax in Karnataka, there is what is called levy by the Agricultural Produce Market Committee. There is an Act. But this Act was intended to eliminate the mal-practices in buying and selling agricultural produce and giving them at fair rates.

MR. SPEAKER.—And to regulate the trade also.

SRI C.M. ARUMUGHAM.—And then for construction of auction-platforms, godowns to store agricultural produce. In the beginning they wanted to collect this levy for the purpose of construction of roads and bridges in the rural parts but that has been struck down by the High Court because the construction of roads is the duty of the Municipality if it is in the Municipal area. duty of the Corporation if it is in the Corporation area and the duty of the Public Works Department in other cases and if the roads through Village Panchayats, it is the duty of the Village Panchayats to construct the roads and also in the Taluk Board area, the Taluk Development Board has to construct the roads. Therefore, they said that Market Committee cannot levy and collect cess for the purpose of construction of roads and bridges. But nevertheless they have collected lakhs of rupees and never spent a paisa and the amount has been deposited in the banks. It has not been useful. Section 65(1) of the Market Committee says that for every transaction, they could collect. It was 30 paise in the beginning and now it has been increased by one percent both from buyer and seller and it went to the High Court. The High Court in the Writ petition said that they cannot collect anything from the agriculturists. Now they are collecting 2% from the buyers or traders on every transaction. You say that you have taken loan from the World Bank and in order to re-pay it you have to collect this. For re-paying loan taken from the World Bank, you cannot tax the consumer. Whatever you collect does not go to the producer. It goes to the Market Committee. It does not come to the consolidated funds of the Government. You will get about 15% to 16% because you are collecting 2% on every transaction. A bag of Rice today costs Rs. 300 and a buyer has to pay Rs. 6 and before this bag reaches the consumer, it has to pass through 4 to 5 traders and it works out to Rs. 25 to 30 per bag and 25 paise to 30 paise per Kg. That adversely affects the consumer. I do agree with the collection, if the money you collect goes to the agriculturists. But it has been lavishly spent by the A.P.M.C., in the form of big car, telephone facilities, Guest House, Kisan Bhavan etc., Kisan Bhavan is meant for A.P.M.C., members only. No agriculturist from village comes and stays in the Kisan Bhavan, You cannot maintain a white Elephant at the cost of the consumers. producers. The A.P.M.C., is meant only to give service to the agriculturists. The moment the agriculturists sells to the trader and when it passes on to the trader, from trader to another trader, the A.P.M.C., does not render any service. The High Court in the last Writ petition said that the Cess could be collected only for the service. You can tax and you need

not say as to what purpose you are collecting. But it must be for some purpose. What service you are doing? The A.P.M.C., does not give any service. Therefore, I submit to the Government to kindly see in this matter. The prices have gone up. When the consumer index goes up, you will have to pay D.A., It is artificial increase on the foodgrains. As my friend Sri K. H. Hanumegowda pointed out the agriculturists must get good prices since they have been suffering But they are not paid properly. The A.P.M.C., is an agency which is helping middle man. When people are suffering, we do not want big buildings. Who asked you to take such a huge loan with so much of interest when you do not have money? You are collecting funds like 'Fakirs' and spending funds like 'Moghals'. Therefore, in the entire country 4% Sales Tax is not there. In Kerala they are collecting 1% only. I would only appeal to the Government to kindly take into consideration the sufferings of the agriculturists and the consumers. Consumers include the agriculturists also. An agriculturists produces and consumes. Today our States population is 3.70 crores according to the latest report and everybody is a consumer Why do you want to increase the Cess? You are not spending it for development works. I only appeal to you that in order to alleviate the sufferings of the cousnmers, you must reduce the cess from 2% to 1%. Secondly it must be a single point cess. If A purchases one bag of Rice and sells to B, you collect from A and B also, and if B sells to C, you collect from C also. Since it is not based on scientific theory, you must kindly review it and dry to help the agriculturists as well as the consumers thereby you can bring down price by about 25 paise per Kg or Rs. 25 per bag atleast Please help the poor consumers.

ಪ್ರ–೦೦ ಪಿ.ಎಂ.

ಶ್ರೀ ಎಸ್.ಆರ್. ಬೊಮ್ಮಾಯಿ,—ಅಧ್ಯಕ್ಷರೆ, ಈ ವಿಚಾರದಲ್ಲಿ ಈ ಸಭೆಯಲ್ಲಿ ತಿದ್ದುಪಡಿ ಬಂದಾಗ ನಾವು ಚರ್ಚೆ ಮಾಡಿದ್ದೇವೆ. ಸರ್ಕಾರದವರು ಈ ಸದನದ ಒಂದು ಸಮಿತಿಯನ್ನು ಮಾಡುತ್ತೇವೆಂದು ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಈ ಆಕ್ಟ್‌ನ್ನು ಸಮಗ್ರವಾಗಿ ಆಲೋಚನೆ ಮಾಡಿ, ಚರ್ಚೆ ಮಾಡಿ, ಸಲಹೆ ಮಾಡಲಿಕ್ಕೆ ಸರ್ಕಾರ ಏನು ಮಾಡಿದೆ ಎಂದರೆ ಒಂದು ಸರ್ಕಾರದ ಕಮಿಟಿಯನ್ನು ನೇಮಿಸಿದ್ದಾರೆ. ಈ ಸದನದ ಕಮಿಟಿಯನ್ನು ನೇಮಿಸಿಲ್ಲ. ಮಾನ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನೇಮಿಸಿದ್ದಾರೆ. ದುರ್ದೈವ, ಆ ಸಮಿತಿಯ ಸಭೆಯನ್ನು ಅಸೆಂಬ್ಲಿ ಅಧಿವೇಶನ ಯಾವ ದಿವಸ ಕೂರುತ್ತದೆ. ಆ ದಿವಸವೇ ಕರೆಯುತ್ತಾರೆ, ಅಸೆಂಬ್ಲಿ ನಡೆಯುತ್ತಿದ್ದಾಗಲೇ ಎರಡು ಸಾರಿ ಸಭೆಸೇರಿದೆ. ಇಲ್ಲಿ ಸದನ ನಡೆಯುವುದರಿಂದ ಮಾನ್ಯ ಸದಸ್ಯರು ಸಮಿತಿಯ ಸಭೆಗೆ ಹೋಗಲಿಕ್ಕೆ ಆಗುವುದಿಲ್ಲ. ಸಮಿತಿಯ ವರದಿಯನ್ನು ಮೂರು ತಿಂಗಳಲ್ಲಿ ಕೊಡುತ್ತೇವೆಂದು ತಿಳಿಸಿದ್ದರು. ಹಿಂದೆ ಈ ಎರಡು ಪರ್ಸೆಂಟಿನ ಬಗ್ಗೆ ವಿರೋಧಪಕ್ಷದ ಸದಸ್ಯರು ಆ ಕಡೆ ಸದಸ್ಯರು ಇದರ ಬಗ್ಗೆ ವಿರೋಧ ವ್ಯಕ್ತಮಾಡಲಾಗಿತ್ತು. ಮೂರು ತಿಂಗಳಲ್ಲಿ ವರದಿಯನ್ನು ಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಇದುವರೆಗೂ ಕೂಡ ಆ ಸಮಿತಿ ಕೂಡ ಕೆಲಸ ಮಾಡಿಲ್ಲ. ಸಮಿತಿಯ ಸಭೆಗಳನ್ನು ಅಸೆಂಬ್ಲಿ ನಡೆಯುವಾಗ ಕರೆಯುತ್ತಿದ್ದಾರೆ. ಅವರು ಕೊಟ್ಟ ಆಶ್ವಾಸನೆಯ ಪ್ರಕಾರ ಸಮಿತಿ ಕಾರ್ಯಕಲಾಪಗಳನ್ನು ನಡೆಸಿ ಬೇಗ ತನ್ನ ವರದಿಯನ್ನು ಕೊಟ್ಟು ತಿದ್ದುಪಡಿಯಾಗಿದ್ದರೆ ಎಲ್ಲಾ ಬಿಡುಗಡೆಯಾಗುತ್ತಿತ್ತು. ಲಾಸ್ಟ್ ಟೈಮ್ ಸಮಿತಿ ಮೀಟಿಂಗ್ ಕರೆದಾಗ,

ಮುಂದಿನ ಅಧಿವೇಶನ ಕರೆಯುವುದರೊಳಗೆ ಮೀಟಿಂಗ್ ಕರೆಯಬಹುದು ಎಂದು ತಿಳಿದುಕೊಂಡಿದ್ದೆ. ಮತ್ತೆ ಓನೇ ತಾರೀಖು ಅಧಿವೇಶನ ಕರೆದ ದಿವಸವೇ ಮೀಟಿಂಗ್ ಕರೆದಿದ್ದರು, ಆ ರೀತಿ ಮಾಡಬಾರದು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಜಯದೇವರಾಜ ಅರಸ್.–ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಆರ್‌ಮುಗಂ ಅವರು ಹೇಳಿದ ಹಾಗೆ ೧ ಪರ್‌ಸೆಂಟ್ ೨ ಪರ್‌ಸೆಂಟ್‌ಗೆ ಏರಿದ್ದು ೧೯೭೫–೭೬ನೇ ಇಸವಿ ಎಂದು ಕಾಣಿಸುತ್ತದೆ. ಆಗಿನ ಸರ್ಕಾರ ಇದಕ್ಕೆ ಒಪ್ಪಿಗೆ ಕೊಟ್ಟಿದ್ದು ರೈತರಿಗೆ ರಸ್ತೆ ಸಾರಿಗೆಗೆ ಉಪಯೋಗವಾಗುತ್ತದೆಂದು. ಇದು ಹೈಕೋರ್ಟಿನಲ್ಲಿ ಸ್ಟೈಕ್ ಆದ ಮೇಲೆ ಬೇರೆ ರೀತಿಯಲ್ಲಿ ಮಾಡಿದ್ದಾರೆ. ಯಾವುದಕ್ಕೆ ಇದು ಉಪಯೋಗವಾಗಬೇಕಾಗಿತ್ತೋ ಆದಕ್ಕೆ ಉಪಯೋಗವಾಗುತ್ತಿಲ್ಲ. ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ೨ ಪರಸೆಂಟ್ ತೆಗೆದುಕೊಂಡು ಮಿಸ್ಯೂಸ್ ಆಗುತ್ತಿದೆ. ಸರ್ಕಾರಕ್ಕೂ ಉತ್ಪತ್ತಿ ಬರುತ್ತಿಲ್ಲ. ರೈತರಿಗೆ ತೊಂದರೆಯಾಗಿದೆ. ಕನ್‌ಸ್ಯೂಮರ್‌ಗೂ ತೊಂದರೆಯಾಗಿದೆ. ಆದುದರಿಂದ, ಮಾನ್ಯ ಮಂತ್ರಿಗಳು ಇದರ ಬಗೆ ಆದಷ್ಟು ಜಾಗ್ರತೆ ರೀಕನ್‌ಸಿಡರ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಸುಧೀಂದ್ರರಾವ್ ಕಸಬೆ (ಮಾರುಕಟ್ಟೆ ಮತ್ತು ಮುಜರಾಯಿಇಲಾಖೆಗಳ ರಾಜ್ಯ ಸಚಿವರು).–ಪ್ರತಿಯೊಂದು ವ್ಯವಸಾಯತ್ಪನ್ನ ಮಾರುಕಟ್ಟೆ ಸಮಿತಿಯು ೧೯೬೬ರ ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆ (ವಿನಿಯಮನ) ಅಧಿನಿಯಮದ ಮೇರೆಗೆ ಏರ್ಪಟ್ಟ ಒಂದು ಸ್ವತಂತ್ರ ಸ್ಥಳೀಯಪ್ರಾಧಿಕಾರ ಪ್ರತಿ ಸಮಿತಿಯು ಸ್ಥಾಪಿಸಿದ ನಿಯಂತ್ರಿತ ಮಾರುಕಟ್ಟೆಯ ಕೇವು ಮುಖ್ಯ ಮೂಲ ಉದ್ದೇಶಗಳೆಂದರೆ ರೈತರ ಹಿತರಕ್ಷಣೆ, ವೈಜ್ಞಾನಿಕ ರೀತಿಯಲ್ಲಿ ಕ್ರಯವಿಕ್ರಯ ಸಂಘಟನೆ, ದಕ್ಷರೀತಿಯಲ್ಲಿ ವ್ಯವಹಾರ ನಡೆಸಲು ಅತ್ಯಗತ್ಯ ಸೌಲಭ್ಯಗಳ ವ್ಯವಸ್ಥೆ ಮತ್ತು ನ್ಯಾಯವಲ್ಲದ ವ್ಯಾಪಾರ ಪದ್ಧತಿಗಳ ನಿವಾರಣೆ. ಈ ರೀತಿ ಇಡೀ ಸಮುದಾಯಕ್ಕೆ ಮಾರುಕಟ್ಟೆ ಸಮಿತಿಯು ಅಮೂಲ್ಯ ಸೇವೆ ಸಲ್ಲಿಸುತ್ತಿದೆ. ಇಷ್ಟೇ ಅಲ್ಲದೆ, ಮುಖ್ಯವಾಗಿ ನ್ಯಾಯವಲ್ಲದ ವ್ಯಾಪರ ಪದ್ಧತಿಗಳನ್ನು ನಿವಾರಿಸುವ ಮೂಲಕ ಉತ್ಪಾದಕನ ಹಿತವನ್ನೂ ಬಳಕೆದಾರರ ಒಳಿತನ್ನೂ ಸಾಧಿಸುವಲ್ಲಿ ನೆರವಾಗುತ್ತದೆ. ಈ ವ್ಯವಸ್ಥೆಯ ನಿರ್ವಹಣೆಗೆ ನಿಧಿಗಳ ವಿನಿಯೋಗವು ಅಗತ್ಯ ಮತ್ತು ಆ ಮೂಲಕ ಒದಗಿಸಲಾಗುವ ಸೇವೆಗಳಿಗೆ ಮಾರುಕಟ್ಟೆ ಶುಲ್ಕದ ರೂಪದಲ್ಲಿ ಹಣ ಸಂದಾಯ ಮಾಡುವುದು ಅಗತ್ಯವೆಂದು ಬೇರೆ ಹೇಳಬೇಕಾಗಿಲ್ಲ, ಮಾರುಕಟ್ಟೆ ಪ್ರದೇಶದಲ್ಲಿ ವ್ಯವಹರಿಸಲಾಗುವ ಸರಕುಗಳು ಉತ್ಪಾದಕರಿಗೆ ಸೇರಿದವುಗಳಾಗಿರಲಿ, ಅಥವಾ ವ್ಯಾಪಾರಿಗಳಿಗೆ ಸೇರಿದವುಗಳಾಗಿರಲಿ, ಮಾರುಕಟ್ಟೆ ಸಮಿತಿಯು ಈ ಸೇವೆಗಳನ್ನು ಸಲ್ಲಿಸುತ್ತದೆ. ಎಲ್ಲ ಸಗಟು ವ್ಯಾಪಾರವು ನಿಯಂತ್ರಣಕ್ಕೆ ಒಳಪಡುವುದೆಂದೂ, ಮತ್ತು ಉತ್ಪಾದಕನು ತನ್ನ ಉತ್ಪನ್ನಗಳನ್ನು ವ್ಯಾಪಾರಿಗೆ ಮಾರಾಟ ಮಾಡಿದರೆ ನಿಯಂತ್ರಣವನ್ನು ಮೊದಲ ಮಾರಾಟಕ್ಕೆ ಸೀಮಿತಗೊಳಿಸುವುದು ಸಾಧ್ಯವಿಲ್ಲವೆಂದೂ ನಿರ್ಮಿತವಾದ. ದೇಶಾದ್ಯಂತ–ಆಷ್ಟೇಕೆ, ಮಾರುಕಟ್ಟೆ ಅರ್ಥವ್ಯವಸ್ಥೆಯಿರುವ ಜಗತ್ತಿನ ಎಲ್ಲ ಪ್ರದೇಶಗಳಲ್ಲೂ, ಮೊದಲ ಹಂತದ ಉತ್ಪಾದಕನಿಗೂ, ಮೊದಲ ಹಂತದ ಬಳಕೆದಾರನಿಗೂ ನೇರ ಸಂಬಂಧವಿರುವುದು ವಿರಳ. ವ್ಯವಸಾಯೋತ್ಪನ್ನವು ಅಂತಿಮವಾಗಿ ಬಳಕೆದಾರನಿಗೆ ಸೇರುವ ಮುನ್ನ ಕನಿಷ್ಠ ಪಕ್ಷ ಪಹಿವಾಟಿನ ಮೂರು ಹಂತಗಳನ್ನು ದಾಟಿ ಹೋಬೇಕಾಗುತ್ತದೆ. ಅಂದರೆ ಉತ್ಪಾದಕನಿಂದ ಸಗಟು ವ್ಯಾಪಾರಿಗೆ, ಸಗಟು ವ್ಯಾಪಾರಿಯಿಂದ ಚಿಲ್ಲರೆ ವ್ಯಾಪಾರಿಗೆ, ಚಿಲ್ಲರೆ ವಾಪಾರಿಯಿಂದ ಕೊನೆಗೆ ಬಳಕೆದಾರನಿಗೆ. ಇವುಗಳ ಪೈಕಿ ಮೊದಲಿನ ಎರಡು ಹಂತಗಳು ನಿಯಂತ್ರಣಕ್ಕೆ ಒಳಪಟ್ಟಿವೆ. ಬಳಕೆದಾರನಿಗೆ ಸರಕುಗಳನ್ನು ಮಾರಾಟ ಮಾಡುವ ಚಿಲ್ಲರೆ ವ್ಯಾಪಾರಿಗೆ ಆ ಸರಕುಗಳು ತಲುಪುವ ಮೊದಲು ಜರಗುವ ಅಂಥ ಪಹಿವಾಟುಗಳ ಗರಿಷ್ಠ ಸಂಖ್ಯೆಯನ್ನು ಇಂತಿಷ್ಟೇ ಎಂದು ವಿಧಿಸುವಂಥ ಯಾವುದೇ ವ್ಯವಸ್ಥೆಯಿಲ್ಲ. ಉತ್ಪಾದಕನಿಂದ ಸಗಟು ವ್ಯಾಪಾರಿಗೆ, ಅವನಿಂದ ಚಿಲ್ಲರೆ ವ್ಯಾಪಾರಿಗೆ ನಡೆಯುವ ಪಹಿವಾಟುಗಳು ಆದೇ ಮಾರುಕಟ್ಟೆಯಲ್ಲಿ ನಡೆಯುವ ಸಂದರ್ಭದಲ್ಲಿ ಮಾತ್ರವೇ ಆ ಮಾರುಕಟ್ಟೆ ಸಮಿತಿಯು ಮಾರುಕಟ್ಟೆ ಶುಲ್ಕವನ್ನು ವಸೂಲು ಮಾಡುತ್ತದೆ. ಆದರೆ ಸರಕುಗಳು ಚಿಲ್ಲರೆ ವ್ಯಾಪಾರಿಯನ್ನು ತಲುಪುವ ಮುಂಚೆ ಒಂದಕ್ಕಿಂತ ಹೆಚ್ಚು ಮಾರುಕಟ್ಟೆಗಳಲ್ಲಿ ಆ ಸರಕುಗಳ ವಹಿವಾಟು ನಡೆದ ಸಂದರ್ಭದಲ್ಲಿ, ಪ್ರತಿಯೊಂದು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯು ಮಾರುಕಟ್ಟೆ ಶುಲ್ಕವನ್ನು ವಸೂಲು ಮಾಡುವುದು ಸಹಜ.

ಪ್ರತಿಯೊಂದು ನಿಯಂತ್ರಿತ ಮಾರುಕಟ್ಟೆಯಲ್ಲಿ ಈ ಸೇವೆಗಳನ್ನು ಸಲ್ಲಿಸುತ್ತಿದ್ದು ಆ ಸೇವೆಗಳಿಗಾಗಿ ಹಣ ಸಂದಾಯ ಮಾಡಬೇಕಾಗಿದೆ ಸರಕಿನ ಸಂಬಂಧವಾಗಿ ಒಂದಕ್ಕಿಂತ ಹೆಚ್ಚು ಬಾರಿ ವ್ಯವಹಾರ ನಡೆದಿದ್ದರೂ ಸಹಾ ಪ್ರತಿಯೊಂದು ಮಾರುಕಟ್ಟೆ ಪ್ರದೇಶದಲ್ಲಿ ವ್ಯವಹರಿಸಲ್ಪಡುವ ಮಾರುಕಟ್ಟೆ ಶುಲ್ಕವನ್ನು

ಕೇವಲ ಒಂದು ಭಾರಿ ಒದಗಿಸಲಾಗಿದೆ. ಹೀಗಾಗಿ ಬಹು ಅಂಶ ಶುಲ್ಕವೆಂದು ಪ್ರತಿದನ ಕರೆಯುವುದು ತಪ್ಪಾಗುತ್ತದೆ.

ಬಳಕೆದಾರನು ವಹಿಸುವ ಉತ್ಪನ್ನದ ವೆಚ್ಚವು ಮಾರುಕಟ್ಟೆ ಶುಲ್ಕ ವಿಧಿಸುವುದರಿಂದ ಹೆಚ್ಚಾಗುತ್ತದೆ ಎಂದು ಹೇಳುವುದು ಸರಿಯಲ್ಲ. ನ್ಯಾಯವಲ್ಲದ ವ್ಯಾಪಾರ ಪದ್ಧತಿಗಳನ್ನು ನಿವಾರಿಸುವುದಕ್ಕಾಗಿ ಮತ್ತು ನಿಯಂತ್ರಿತ ಮಾರುಕಟ್ಟೆ ಪ್ರದೇಶಗಳಲ್ಲಿ ವೈಜ್ಞಾನಿಕ ಕ್ರಯವಿಕ್ರಯ ಮತ್ತು ಇತರ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಈ ಶುಲ್ಕವನ್ನು ಬಳಸಲಾಗುತ್ತದೆ. ಮೇಲೆ ಹೇಳಿದ ಕ್ರಮಗಳಿಂದ ಉತ್ಪಾದಕನು ಗಳಿಸುವ ಲಾಭದ ಮೇಲೆ ಮತ್ತು ಬಳಕೆದಾರನು ತೆರಬೇಕಾದ ಬೆಲೆಯ ಮೇಲೆ ಅನುಕೂಲ ಪರಿಣಾಮ ಉಂಟಾಗುತ್ತದೆ. ಕರ್ನಾಟಕದಲ್ಲಿ ಈಗ ಚಾಲ್ತಿಯಲ್ಲಿರುವ ಮಾರುಕಟ್ಟೆ ಶುಲ್ಕಗಳನ್ನು ಬಹಳ ಹೆಚ್ಚೆಂದು ಹೇಳಂವಂತಿಲ್ಲ. ದೇಶದ ಇತರ ರಾಜ್ಯಗಳಲ್ಲಿ ಚಾಲ್ತಿಯಲ್ಲಿರುವ ಮಾರುಕಟ್ಟೆ ಶುಲ್ಕದ ದರಗಳನ್ನು ಇಲ್ಲಿ ತೋರಿಸಲಾಗಿದೆ.

೧.	ಪಂಜಾಬ್	...	ಶೇ. ೨
೨.	ಹರಿಯಾಣ	...	ಶೇ. ೨
೩.	ಮುಂಬಯಿ ನಗರ	...	ಶೇ. ೧
೪.	ಮಹಾರಾಷ್ಟ್ರ	...	ಶೇ. ೦.೫
೫.	ರಾಜಸ್ಥಾನ್	...	ಶೇ. ೧
೬.	ದೆಹಲಿ	...	ಶೇ. ೧
೭.	ಆಂಧ್ರಪ್ರದೇಶ	...	ಶೇ. ೧
೮.	ತಮಿಳುನಾಡು	...	೧೦೦ ರೂ. ಗಳಿಗೆ ೪೫ ಪೈಸೆ.
೯.	ಪಶ್ಚಿಮ ಬಂಗಾಳ	...	೧ ರೂ.ಗಿಂತ ಕಡಿಮೆಯಲ್ಲದಷ್ಟು ಆದರೆ ಶೇ. ೨ಕ್ಕಿಂತ ಹೆಚ್ಚಿಲ್ಲದಷ್ಟು
೧೦.	ಉತ್ತರ ಪ್ರದೇಶ	—	ಶೇ. ೧
೧೧.	ಹಿಮಾಚಲ ಪ್ರದೇಶ	...	ಶೇ. ೧

ಮಾರುಕಟ್ಟೆ ಪ್ರದೇಶ ಮತ್ತು ಕ್ರಮಬದ್ಧ ಮಾರುಕಟ್ಟೆ ಸೇವೆ ವ್ಯವಸ್ಥೆಗಳ ಮತ್ತು ಅತ್ಯಗತ್ಯ ಸೌಲಭ್ಯ ಮತ್ತು ಅನುಕೂಲಗಳ ಅಭಿವೃದ್ಧಿಗಾಗಿ ಮಾಡಬೇಕಾದ ವೆಚ್ಚವನ್ನು ಹೀಗೆ ವಸೂಲಿ ಮಾಡಿದ ಈ ಶುಲ್ಕದಿಂದ ಸರಿ ಹೊಂದಿಸಬಹುದಾಗುತ್ತದೆ. ಮೇಲೆ ಹೇಳಿದ ಅತ್ಯಗತ್ಯ ಸೌಲಭ್ಯಗಳು ಈ ಮುಂದಿನಂತಿವೆ : ಭೂಸ್ವಾಧೀನ, ಹರಾಜು ಕಟ್ಟೆ ವ್ಯವಸ್ಥೆ, ಗೊಡೌನ್‌ಗಳು, ಮೇಲ್ಚಾವಣಿ ಸಿಬ್ಬಂದಿ, ವರ್ಗೀಕರಣ ಸೌಲಭ್ಯಗಳು, ರಸ್ತೆಗಳು ಶೌಚಗೃಹಗಳು, ನೀರು, ನಿರ್ಮಲೀಕರಣ, ದೀಪ ವ್ಯವಸ್ಥೆ, ವಿದ್ಯುಚ್ಛಕ್ತಿ ಸರಬರಾಜು, ಕ್ಯಾಂಟೀನುಗಳು, ಜಾನುವಾರು ಕೊಟ್ಟಿಗೆಗಳು, ವಿಶ್ರಾಂತಿ ಗೃಹಗಳು, ಕಚೇರಿ ಕಟ್ಟಡಗಳು ಉತ್ಪಾದಕರಿಗೆ ಮತ್ತು ಕಮಿಷನು ಏಜೆಂಟರುಗಳಿಗೆ ಅಂಗಡಿಗಳು ಮತ್ತು ಇತರ ಸೌಲಭ್ಯಗಳು ಅಂಚೆ ಕಚೇರಿಗಳು, ಬ್ಯಾಂಕು ಸೌಲಭ್ಯಗಳು, ನೈರ್ಮಲ್ಯ ಬ್ಲಾಕುಗಳು ಮುಂತಾದ ಸೌಲಭ್ಯಗಳು.

ಈಗ ಶೇಕಡಾ ೨ರಷ್ಟು ಮಾರುಕಟ್ಟೆ ಶುಲ್ಕವನ್ನು ವಿಧಿಸಲು ಅಧಿನಿಯಮದಲ್ಲಿ ಉಪಬಂಧ ಕಲ್ಪಿಸಿದೆ, ಈ ದರದ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ಸಾಕಷ್ಟು ಸಂಖ್ಯೆಯ ರಿಟ್ ಅರ್ಜಿಗಳ ಮೂಲಕ ಆಕ್ಷೇಪಣೆಗಳನ್ನು ಮಾಡಲಾಗಿದೆ ಮತ್ತು ಶೇಕಡಾ ೧ ರಷ್ಟು ಮಾತ್ರ ಮಾರುಕಟ್ಟೆ ಶುಲ್ಕವನ್ನು ವಿಧಿಸುವುದಕ್ಕಾಗಿ ಎಪಿಎಂಸಿಯನ್ನು ಅನುಮತಿಸುವಂತೆ ಉಚ್ಚನ್ಯಾಯಾಲಯವು ಈ ಬಗ್ಗೆ ಆಂಶಿಕ ತಡೆಯಾಜ್ಞೆ ನೀಡಿದೆ. ಈ ರಿಟ್ ಅರ್ಜಿಗಳು ಉಚ್ಚನ್ಯಾಯಾಲಯದಲ್ಲಿ ಇನ್ನೂ ತೀರ್ಮಾನವಾಗಬೇಕಾಗಿದೆ.

ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಸಂಬಂಧಿಸಿ ಮಾರಾಟಗಾರರಿಂದ ಶೇಕಡಾ ೧ ರಷ್ಟು ವಸೂಲು ಮಾಡಲಾದ ಮಾರುಕಟ್ಟೆ ಶುಲ್ಕವನ್ನು ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ಮಾಣದ ಸಲುವಾಗಿ ರಾಜ್ಯ ರಸ್ತೆಗಳು ಮತ್ತು ಸೇತುವೆ ನಿಧಿಗೆ ಜಮೆ ಮಾಡಬೇಕಾಗಿತ್ತು. ಆಗ ಇದ್ದಂತೆ ಅಧಿನಿಯಮದ ಮೇರೆಗೆ ಗ್ರಾಮೀಣ ರಸ್ತೆಗಳ ನಿರ್ವಹಣೆಯು ಮಾರುಕಟ್ಟೆ ಸಮಿತಿಯ ಕರ್ತವ್ಯವಾಗಿರಲಿಲ್ಲ ಎಂಬ ಕಾರಣದಿಂದ ಕರ್ನಾಟಕ ಉಚ್ಚನ್ಯಾಯಾಲಯವು ಅದನ್ನು ತಳ್ಳಿಹಾಕಿತ್ತು. ನ್ಯಾಯಾಲಯದ ತೀರ್ಮಾನದ ತರುವಾಯ ಪೂರ್ವಾನ್ವಯ ಪರಿಣಾಮವಾಗುವ ಹಾಗೆ ಅಧಿನಿಯಮವನ್ನು ತಿದ್ದುಪಡಿ ಮಾಡಿ ಮಾರುಕಟ್ಟೆಗೆ ಸಾರಿಗೆ ಸೌಲಭ್ಯಗಳನ್ನು ಒದಗಿಸಲು, ಮಾರುಕಟ್ಟೆ ಸಮಿತಿಗಳಿಗೆ ಅವಕಾಶ ಕಲ್ಪಿಸಲಾಗಿದೆ.

ನ್ಯಾಯಾಲಯವು ತಡೆಯಾಜ್ಞೆ ನೀಡಿರುವುದರಿಂದ ಸ್ಥಾರಿಗೆ ಸೌಲಭ್ಯಗಳನ್ನು ಒದಗಿಸುವ ದಿಸೆಯಲ್ಲಿ ಯಾವುದೇ ಮುಂದಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿಲ್ಲ. ಈಗ ಇತ್ಯರ್ಥವಾಗಬೇಕಾಗಿರುವ ಪ್ರಕರಣಗಳಿಗೆ ಸಂಬಂಧಿಸಿ ಉಚ್ಚ ನ್ಯಾಯಾಲಯವು ನೀಡುವ ತೀರ್ಮಾನವನ್ನು ಅನುಸರಿಸಿ ಈ ಬಗ್ಗೆ ಕ್ರಮ ಕೈಕೊಳ್ಳಬಹುದಾಗಿದೆ.

೧೧ಳಿ ಮಾರುಕಟ್ಟೆ ಸಮಿತಿಗಳ ಪೈಕಿ ೪೫ ಮಾರುಕಟ್ಟೆಗಳು ಮಾತ್ರ ಹೆಚ್ಚುವರಿ ನಿಧಿಯನ್ನು ಹೊಂದಿದೆ. ಸಾಕಷ್ಟು ಪ್ರಮಾಣದ ಮೆಚ್ಚವನ್ನು ಒಳಗೊಂಡು ಕಾರ್ಯಕ್ರಮಗಳನ್ನು ರೂಪಿಸಿ ಕೊಳ್ಳಲಾಗಿದೆ. ಈ ಯೋಜನೆಗಳ ಪೈಕಿ ಕೆಲವು ಯೋಜನೆಗಳಿಗೆ ವಿಶ್ವಬ್ಯಾಂಕ್ ಮತ್ತು ವಾಣಿಜ್ಯ ಬ್ಯಾಂಕುಗಳೂ ಸೇರಿ ಇತರ ಸ್ಥಳೀಯ ಹಣ ಸಾಲ ನೀಡಿಕೆ ಏಜೆನ್ಸಿಗಳಿಂದ ನಿಧಿಯನ್ನು ಕೋರಿದೆ. ಆದ್ದರಿಂದ ಈ ನಿಧಿಗಳು ಅಗತ್ಯತೆಯನ್ನು ಪೂರೈಸುವುದಕ್ಕಾಗಿ ಹೆಚ್ಚಾಗಿದೆ ಎಂದು ಹೇಳುವಂತಿಲ್ಲ. ಸೂಕ್ತ ಪ್ರಮಾಣದ ಮತ್ತು ಸೂಕ್ತ ಗುಣಮಟ್ಟದ ಆತ್ಮಗತ್ಯ ಸೌಲಭ್ಯಗಳೂ ಸೇರಿ ಸಂಯೋಜಿತ ಮಾರುಕಟ್ಟೆ ಪ್ರದೇಶಗಳನ್ನು ಅಭಿವೃದ್ಧಿಗೊಳಿಸಲು ಮಾರುಕಟ್ಟೆ ಸಮಿತಿಗಳಿಗೆ ಸಾಕಷ್ಟು ಮತ್ತು ಸೂಕ್ತ ಭೂಮಿಗಳನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ವಿಳಂಬವಾಗಿರುವ ಕಾರಣ ಮತ್ತು ಸಿಮೆಂಟು, ಉಕ್ಕು ಹಾಗೂ ಕಟ್ಟಡಕ್ಕೆ ಆಗತ್ಯವಿರುವ ಇತರ ಸಾಮಗ್ರಿಗಳು ಸಕಾಲದಲ್ಲಿ ದೊರಕುತ್ತಿಲ್ಲವಾದ ಕಾರಣ ಈ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ವಿಳಂಬವಾಗಿದೆ. ಆ ಮೂಲಕ ಮಾರುಕಟ್ಟೆ ಸಮಿತಿಗಳಲ್ಲಿ ಹೆಚ್ಚುವರಿ ಹಣ ಉಳಿದಿದೆ. ಈಗಾಗಲೇ ಆ ಹಣವನ್ನು ರೂಪಿಸಲಾದ ಬೃಹತ್ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಅಗತ್ಯ ಸೌಕರ್ಯಗಳು ದೊರಕುವವರೆಗೆ ಆ ಹೆಚ್ಚುವರಿ ಹಣ ನಿಷ್ಕ್ರಯವಾಗದಂತೆ ಅವುಗಳನ್ನು ನಿಶ್ಚಿತ ಠೇವಣಿಯಲ್ಲಿ ಇಡಲಾಗಿದೆ.

ಸನ್ಮಾನ್ಯ ಅಧ್ಯಕ್ಷರೆ, ಮಾನ್ಯಸದಸ್ಯರಾದ ಆರ್ಮುಗಂ ಅವರು ಇದರ ಮೇಲೆ ೪ ಪರ್‌ಸೆಂಟ್ ಸೇಲ್ಸ್ ಟ್ಯಾಕ್ಸ್ ಇದೆ ಎಂದು ಹೇಳಿದ್ದಾರೆ. ಅದು ಬೇರೆ ಇಲಾಖೆಗೆ ಸೇರಿದ್ದು. ಅವರು ಕಾನೂನು ಪ್ರಕಾರ ಪಾಸುತ್ತಾರೆ. ಇನ್ನು ಮಾನ್ಯ ಸದಸ್ಯರಾದ ಬೊಮ್ಮಾಯಿಯವರು ಹೇಳಿದ ಹಾಗೆ ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿಯ ಮೀಟಿಂಗ್ ಎರಡನೇ ಸಾರಿ ಕರೆದಾಗ ಸಮಿತಿಯ ಸದಸ್ಯರ ಸಲಹೆಗಳನ್ನು ಕೊಡುತ್ತಾ ನಾವು ಬೇರೆ ರಾಜ್ಯಗಳಿಗೆ ಹೋಗಿ ಅಲ್ಲಿರತಕ್ಕದ್ದನ್ನು ನೋಡಿಕೊಂಡು ಬಂದು ಸಮಿತಿ ಕೂರೋಣ ಎಂದು ಹೇಳಿದ್ದರಿಂದ ಅದೇ ಪ್ರಕಾರ ನಿರ್ಣಯ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರಾದ ಆರ್ಮುಗಂ ಅವರು ಕನ್‌ಸೂಮರ್‌ಗೆ ಬಹಳ ಅನ್ಯಾಯವಾಗುತ್ತಿದೆ ೧ ಪರ್‌ಸೆಂಟ್ ಮಾಡಬೇಕೆಂದು ಹೇಳಿದರು. ಇದು ನಮ್ಮ ಸಚಿವ ಸಂಪುಟದ ಸಭೆಯಲ್ಲಿ ಮುಂದೆ ಬರತಕ್ಕ ವಿಷಯ. ಒಂದು ಪರ್‌ಸೆಂಟ್ ಮಾಡುವುದನ್ನು ಪರಿಶೀಲಿಸುತ್ತೇವೆಂದು ಹೇಳುತ್ತೇನೆ.

ಕೆ. ಭಾಸ್ಕರ ನಾಯಕ್.—ಮಾನ್ಯ ಸಯನಕ್‌ರವರು ಇಂಗ್ಲಿಷ್‌ನಲ್ಲಿ ಟ್ರಾನ್ಸ್‌ಲೇಟ್ ಮಾಡಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು. Mr. Sayanak. Please translate what the Hon. Minister said in Canarese into English and tell us.

ಎಸ್. ಆರ್. ಬೊಮ್ಮಾಯಿ.—ನಾಯ್ಡುರವರಿಗೆ ಕನ್ನಡ ಅರ್ಥವಾಗಲಿಲ್ಲ ಅಂತ ಕಾಣುತ್ತೆ. ನಮಗೆ ಸಂಬಂಧಪಟ್ಟ ಆಂಧ್ರ, ಮಹಾರಾಷ್ಟ್ರ, ತಮಿಳ್ನಾಡು, ಕೇರಳಗಳನ್ನು ಹೇಳಲಿಲ್ಲ. ಮಹಾರಾಷ್ಟ್ರ ೦.೫ ಪರ್ಸೆಂಟ್ ಇದೆ, ಆಂಧ್ರ ೧ ಪರ್ಸೆಂಟ್ ಇದೆ, ತಮಿಳ್ನಾಡು ೦.೫ ಪರ್ಸೆಂಟ್‌ಗಿಂತಲೂ ಕಡಿಮೆ ಇದೆ. ನಿಪ್ಪಾಣಿಯಲ್ಲಿ ತಂಬಾಕು ಆಗುವುದಿಲ್ಲ, ರಾಗಿ ಆಗುತ್ತಿಲ್ಲ ಹಿಂದೆ ಈ ವಿಚಾರವನ್ನು ಒಂದು ದಿವಸ ಚರ್ಚೆ ಮಾಡಿದ್ದೇನೆ. ಎಲ್ಲ ರಾಜ್ಯಗಳನ್ನೂ ಸುತ್ತಿಕೊಂಡು ಬಂದು ವರದಿಮಾಡಬೇಕಾದರೆ ಅವರಿಗೆ ಎಷ್ಟು ದಿವಸಬೇಕಾಗುತ್ತದೋ ಗೊತ್ತಿಲ್ಲ. ಇನ್ನು ೩ ತಿಂಗಳಲ್ಲಿ ವರದಿ ಕೊಡುತ್ತೇನೆಂದು ಹೇಳಿದ್ದರು. ಆದರೆ ೬ ತಿಂಗಳಾದರೂ ಇನ್ನೂ ವರದಿ ಕೊಟ್ಟಿಲ್ಲ.

Sri C. M. Arumugham.—Of course, the Hon, Minister has said that he would consider. But I would like to bring to his notice that there is no Sales Tax on foodgrains in Tamil Nadu, Maharashtra and Gujarat. In all the northern States, there is no Sales Tax on wheat. You are levying 4%. I am not asking you to reduce it. Let Mr. Moily take the decision. Atleast here in Market Cess, you can keep one percent and make it a single point.

MR. SPEAKER.—That is what he said. He is going to consider it.

SRI C. M. ARUMUGHAM.—That is my request. It should not be multi-point. Kindly see that the Committee meets after this Assembly session and let it take decision as early as possible so that the consumers will be relieved and their burden will be lessened. This point you will have to take note and try to help the consumers of Karnataka.

MR. SPEAKER.—Please resume your seat.

SRI C. M. ARUMUGHAM.—Let him reply. We must and the House must know that there is no Sales Tax for notified commodities. In Tamil Naidu, Maharashtra and Gujarat and in some northern States there is no tax on Wheat but you are levying Sales Tax of 4%. It affects the consumers.

MR. SPEAKER.—On Sales Tax you can speak on the budget discussion tomorrow.

SRI C. M. ARUMUGHAM.—He says out of 10 or 12 States he has quoted, nine to ten States levy less than 1%.

MR. SPEAKER.—He is concerned only with Market Cess.

SRI C. M. ARUMUGHAM.—For his knowledge and information, I brought it to his notice.

ಶ್ರೀ ಸುಧೀಂದ್ರರಾವ್ ಕಸಬೆ.—ಇದನ್ನು ಕನ್‌ಸ್ಯೂಮರ್ಸ್ ಮೇಲೆ ಹಾಕಿದರೆ ತೊಂದರೆಯಾಗುತ್ತದೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದ್ದರಿಂದ ಇದನ್ನು ನಾನು ವಿಚಾರಮಾಡಿ ನೋಡುತ್ತೇನೆ.

MR. SPEAKER.—That comes within the purview of the Finance Minister. He confuses the members

ಶ್ರೀ ಜೆ. ಎಚ್. ಪಟೇಲ್.—ಅವರಿಗೆ ವಿಚಾರ ಮಾಡುವುದಕ್ಕೂ ಬರುತ್ತದೆಂದು ನಮಗೆ ಇವತ್ತು ಗೊತ್ತಾಯಿತು.

ANNOUNCEMENT

MR. SPEAKER.—I have received the following message from the Chairman, Legislative Council :

> As required by Rule 106 of the Rules of Procedure and Conduct of Business in Karnataka Legislative Council, I send herewith the following Bills which have been agreed to by the Legislative Council on 23rd March, 1981 without amendments.